ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ,
ಶ್ರೀರಂಗಪಟ್ಟಣ.

ಸಿ.ಸಿ.ಃ 101/2017

ಸಿ. ಡಬ್ಲ್ಯು: 05
ಪಿ. ಡಬ್ಲ್ಯು: 04

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಡಾ. ಸೌಮ್ಯ.ಸಿ.ಎಸ್ |
| ತಂದೆ/ಪತಿಯ ಹೆಸರು | ಃ | ಎಂ.ಎನ್.ರಾಜೇಂದ್ರ ಪ್ರಸಾದ್ |
| ವಯಸ್ಸು | ಃ | 48 ವರ್ಷ |
| ವೃತ್ತಿ | ಃ | ವೈದ್ಯಾಧಿಕಾರಿಗಳು, ಮೈಸೂರು |
| ವಾಸ | ಃ | ಮೈಸೂರು |

ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕಃ 26.06.2024

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದ

ನಾನು 2008 ರಿಂದ 2021 ರವರೆಗೆ ಕೆ.ಆರ್.ಸಾಗರದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿಃ 27.04.2016 ರಂದು ರವಿ ಎಂಬುವವರು ಚಿಕಿತ್ಸೆಗಾಗಿ ಹಲ್ಲೆ ಸಂಬಂಧ ನಮ್ಮ ಆಸ್ಪತ್ರೆಗೆ ಬಂದಿದ್ದು ಅದರಂತೆ ನಾನು ಅವರಿಗೆ ಚಿಕಿತ್ಸೆ ನೀಡಿರುತ್ತೇನೆ. ನಾನು ಚಿಕಿತ್ಸೆ ನೀಡಿದಾಗ ಕಂಡುಬಂದಿದ್ದು ಏನೆಂದರೆ-

1) ಬಲಗೈ ಉಂಗುರದ ಬೆರಳಿನ ಹತ್ತಿರ 7 ಮಿ.ಮಿ ಆಳತೆಯ ಹರಿದ ಗಾಯವಾಗಿರುತ್ತದೆ.

2) ಬಲಗೈ ನ ಮೇಲೆ ಊತದ ಗಾಯಗಳು ಕಂಡುಬಂದಿರುತ್ತದೆ.

ನಂತರ ಪೋಲೀಸ್ ಠಾಣೆಗೆ ಇದರ ಮಾಹಿತಿಯನ್ನು ನೀಡಿರುತ್ತೇನೆ. ನಂತರ ಪೋಲೀಸರಿಗೆ ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ನನ್ನ ಅಭಿಪ್ರಾಯದಲ್ಲಿ ಸದರಿ ಗಾಯಗಳು ಸಾಧಾರಣ ಸ್ವರೂಪದ ಗಾಯಗಳಾಗಿರುತ್ತದೆ. ಸಾಕ್ಷಿಗೆ ಈಗ ಗಾಯದ ಪ್ರಮಾಣ ಪತ್ರವನ್ನು ತೋರಿಸಿದ್ದು ಸಾಕ್ಷಿ ಅದನ್ನು ಗುರುತಿಸಿದ್ದು ಅದನ್ನು ನಿಪಿ.3 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.3-ಎ ಎಂದು ಗುರುತಿಸಲಾಯಿತು.

**ಪಾಟೀಸವಾಲು : ಆರೋಪಿ ಪರ ವಕೀಲರಿಂದ**

ನನ್ನ ಗಾಯದ ಪ್ರಮಾಣ ಪತ್ರದಲ್ಲಿ ಗಾಯದ ವಯಸ್ಸನ್ನು ನಮೂದಿಸಿರುವುದಿಲ್ಲ ಎಂದರೆ ಸರಿ. ಗಾಯದ ಪ್ರಮಾಣ ಪತ್ರದಲ್ಲಿ ಬರೆದಿರುವ ಗಾಯಗಳು ಸುಮಾರು ಅರ್ಧ

ಗಂಟೆ ಹಿಂದೆ ಆಗಿರಬಹುದೇ ಎಂಬ ಪ್ರಶ್ನೆಗೆ ಸಾಕ್ಷಿಯು ಆಗಿರಬಹುದು ಎಂದು ನುಡಿಯುತ್ತಾರೆ. ರವಿ ರವರು ನೀಡಿರುವ ಸುಳ್ಳು ಮಾಹಿತಿ ಮೇಲೆ ನಾನು ಅವರಿಗೆ ದಿಃ 26.04.2016 ರಂದು ಹಲ್ಲೆಯಾಗಿರುತ್ತದೆ ಎಂದು ಸುಳ್ಳು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

ಸಾಮಾನ್ಯವಾಗಿ ಬೈಕ್ ಅಥವಾ ಸೈಕಲ್ ನಲ್ಲಿ ಹೋಗಬೇಕಾದರೆ ಬಿದ್ದಂತಹ ಸಂದರ್ಭದಲ್ಲಿ ಗಾಯದ ಪ್ರಮಾಣ ಪತ್ರದಲ್ಲಿ ನಮೂದಿಸಿರುವಂತಹ ಗಾಯಗಳು ಆಗಬಹುದುಎನ್ನುವ ಪ್ರಶ್ನೆಗೆ ಸಾಕ್ಷಿಯು ಆಗಬಹುದು ಎಂದು ನುಡಿಯುತ್ತಾರೆ. ನಾನು ತನಿಖಾಧಿಕಾರಿಯವರ ಮಾತು ಕೇಳಿ ಸುಳ್ಳು ಪ್ರಮಾಣ ಪತ್ರವನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.